# ಕರ್ನಾಟಕ ಸರ್ಕಾರ

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

| | | |
|---|---|---|
| 1 | ಇಲಾಖೆಯ ಹೆಸರು | ಶಿಕ್ಷಣ ಇಲಾಖೆ |
| 2 | ಸೇವೆಯ ಹೆಸರು | ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ |
| 3 | ಈ ಸೇವೆ ಪಡೆಯಲು ಸಂಪರ್ಕಿಸಬೇಕಾದ ಅಧಿಕಾರಿ (ಹೆಸರಿಸಲಾದ ಅಧಿಕಾರಿ) | ಹಿರಿಯ ಸಹಾಯಕ ನಿರ್ದೇಶಕರು ಸಿ ವಿಭಾಗ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮಲ್ಲೇಶ್ವರಂ, ಬೆಂಗಳೂರು |
| 4 | ಈ ಸೇವೆಯಲ್ಲಿ ಒಳಗೊಂಡಿರುವ ಕಾರ್ಯ ವಿಧಾನ | 1. ಮಂಡಳಿ ನಿಗಧಿಪಡಿಸಿರುವ ದಿನಾಂಕದೊಳಗೆ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ವಿವರಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು<br>2. ಮಂಡಳಿಯಲ್ಲಿ ಅರ್ಜಿ ಸ್ವೀಕರಿಸಿದ ನಂತರ ಆಯಾ ದಿನದ ಆನ್‌ಲೈನ್‌ನಲ್ಲಿ ಬಂದಿರುವ ಡಾಟಾವನ್ನು ಗಣಕಶಾಖೆಯಿಂದ ಸಿ ಶಾಖೆಗೆ ಕಳುಹಿಸಲಾಗುತ್ತದೆ.<br>3. ಸಿ ಶಾಖೆಯಿಂದ ಆಯಾ ದಿನದ ಮರುಮೌಲ್ಯಮಾಪನದ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗಳ ಡಾಟಾವನ್ನು ಪ್ರಿಂಟ್ ತೆಗೆದು ಆಯಾ ಜಿಲ್ಲೆಗಳ ಪರಿಶೀಲನಾ ಶಾಖೆಯ ಶಾಖಾಧಿಕಾರಿಗಳಿಗೆ ವಿಷಯವಾರು/ಮಾಧ್ಯಮವಾರು ಮೂಲ ಉತ್ತರ ಪತ್ರಿಕೆಗಳನ್ನು ನೀಡುವಂತೆ ಇಂಡೆಂಟ್ ನೀಡಲಾಗುವುದು.<br>4. ಆಯಾ ದಿನದ ಮರುಮೌಲ್ಯಮಾಪನದ ಉತ್ತರ ಪತ್ರಿಕೆಗಳನ್ನು ಮಂಡಳಿಯು ನೇಮಿಸುವ ತ್ರಿಸದಸ್ಯ ಸಮಿತಿಯ ಶಿಕ್ಷಕರುಗಳಿಗೆ ನೀಡಲಾಗುವುದು.<br>5. ತ್ರಿಸದಸ್ಯ ಸಮಿತಿಯ ಶಿಕ್ಷಕರುಗಳು ನೀಡುವ ಅಂಕಗಳ ತಃಖ್ತೆಯಲ್ಲಿನ ಗಣಕಶಾಖೆಯಲ್ಲಿ ಗಣಕೀಕರಿಸಲಾಗುವುದು. (ತ್ರಿಸದಸ್ಯ ಸಮಿತಿಯ ಶಿಕ್ಷಕರುಗಳಿಂದ)<br>6. ಗಣಕಶಾಖೆಯಿಂದ ಮರುಮೌಲ್ಯಮಾಪನ ಫಲಿತಾಂಶವನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಮೊಬೈಲ್‌ಗಳಿಗೆ ಮಾಹಿತಿ ನೀಡಲಾಗುತ್ತದೆ.<br>7. 06 ಮತ್ತು 06 ಕ್ಕಿಂತ ಹೆಚ್ಚು ಅಂಕಗಳಲ್ಲಿ ವ್ಯತ್ಯಾಸ ಪಡೆದ ವಿದ್ಯಾರ್ಥಿಗಳಿಗೆ ಮಂಡಳಿ ನಿಯಮಾನುಸಾರ ಮರುಮೌಲ್ಯಮಾಪನ ಶುಲ್ಕ ಮರುಪಾವತಿಸಲಾಗುವುದು.<br>8. ಮರುಮೌಲ್ಯಮಾಪನ ಫಲಿತಾಂಶ ಅಂತಿಮವಾಗಿದ್ದು, ಮರುಪರಿಶೀಲನೆಗೆ ಅವಕಾಶವಿರುವುದಿಲ್ಲ.<br>9. ಪರಿಷ್ಕೃತ ಫಲಿತಾಂಶ ಗಣಕಶಾಖೆಯಿಂದ ಸಂಬಂಧಿಸಿದ ಶಾಲೆಗಳಿಗೆ ವಿತರಿಸಲಾಗುವುದು. |
| 5 | ಈ ಸೇವೆ ಪಡೆಯಲು ನಿಗಧಿಪಡಿಸಿರುವ ನಮೂನೆ | ಮರುಮೌಲ್ಯಮಾಪನಕ್ಕಾಗಿ ಅರ್ಜಿಸಲ್ಲಿಸುವವರು ಆನ್‌ಲೈನ್ ಮೂಲಕ/ ಬೆಂಗಳೂರು-ಒನ್/ಕರ್ನಾಟಕ-ಒನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಮತ್ತು ಈ ಬಗ್ಗೆ ಮಂಡಳಿಯ ವೆಬ್‌ಸೈಟ್ ಮೂಲಕ ಮಾಹಿತಿ ಪಡೆಯಬಹುದಾಗಿರುತ್ತದೆ. |
| 6 | ಈ ಸೇವೆಯನ್ನು ಪಡೆಯಲು ಇರುವ ಅರ್ಹತೆ | 1. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಸಂಬಂಧಪಟ್ಟ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾದ ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.<br>2. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮೊದಲು ಉತ್ತರ ಪತ್ರಿಕೆಗಳ ಛಾಯಾಪ್ರತಿಗಳನ್ನು ಪಡೆದ ನಂತರ |

| | | |
|---|---|---|
| | | ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬೇಕು. |
| 7 | ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು | 1. ನಿಗಧಿತ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು<br>2. ಎಸ್.ಎಸ್.ಎಲ್.ಸಿ ಪರೀಕ್ಷೆಯ ಉತ್ತರ ಪತ್ರಿಕೆಯ ಮುಖಪುಟದ ಛಾಯಾಪ್ರತಿ |
| 8 | ಈ ಸೇವೆಯನ್ನು ನಿಗಧಿತ ದಿನಾಂಕದೊಳಗೆ ನೀಡದಿದ್ದಲ್ಲಿ ಅಥವಾ ಇದನ್ನು ತಿರಸ್ಕರಿಸಿದ್ದಲ್ಲಿ, ಮೇಲ್ಮನವಿ ಸಲ್ಲಿಸಬೇಕಾದ ಸಕ್ಷಮ ಪ್ರಾಧಿಕಾರಿ ಹೆಸರು | ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು |
| 9 | ಸಕ್ಷಮ ಪ್ರಾಧಿಕಾರಿ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ನಿಗಧಿಪಡಿಸಿರುವ ಕಾಲಾವಧಿ | 15 ದಿನಗಳು |
| 10 | ಸಕ್ಷಮ ಪ್ರಾಧಿಕಾರಿ ಮೇಲ್ಮನವಿಯನ್ನು ನಿಗಧಿತ ದಿನಾಂಕದೊಳಗೆ ಇತ್ಯರ್ಥಪಡಿಸದಿದ್ದಲ್ಲಿ ಅಥವಾ ಸಕ್ಷಮ ಪ್ರಾಧಿಕಾರಿಯ ಎರಡನೇ ಮೇಲ್ಮನವಿ ಸಲ್ಲಿಸಬೇಕಾದ ಪ್ರಾಧಿಕಾರಿಯ ಹೆಸರು | ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ , 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು |
| 11 | ಎರಡನೇ ಮೇಲ್ಮನವಿಯನ್ನು ಇತ್ಯರ್ಥಪಡಿಸಲು ನಿಗಧಿಪಡಿಸಿರುವ ಕಾಲಾವಧಿ | 15 ದಿನಗಳು |
| 12 | ಇತರೆ ವಿಷಯಗಳು | 1. ಸಾಮಾನ್ಯವಾಗಿ ಪ್ರತಿ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಮಂಡಳಿಯು ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸ್ವೀಕರಿಸಲು ಕಡೆಯ ದಿನಾಂಕಗಳನ್ನು ಪ್ರಕಟಿಸುತ್ತದೆ ನಿಗಧಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.<br>2. ಮರುಮೌಲ್ಯಮಾಪನದ ಅರ್ಜಿಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. |

ಹಿರಿಯ ಸಹಾಯಕ ನಿರ್ದೇಶಕರು

'ಸಿ' ವಿಭಾಗ